## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.

**ಪ್ರಶ್ನೆ:**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆಂಪೇಗೌಡ ಬಡಾವಣೆ ರಚಿಸಲು ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಾಲ್ಲೂಕಿನ ಹಲವು ಗ್ರಾಮಗಳ ಸುಮಾರು 4043 ಎಕರೆ 27 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬೆಂಗಳೂರು ದಕ್ಷಿಣ ಹಾಗೂ ಉತ್ತರ ತಾಲ್ಲೂಕಿನಲ್ಲಿ ಬರುವ ಸೂಲಿಕೆರೆ, ಕೆಂಚನಪುರ ಹಾಗೂ ಕನ್ನಲ್ಲಿ ಗ್ರಾಮದಲ್ಲಿನ ಹೈಟೆಕ್ ವಲಯಕ್ಕೆ ಮೀಸಲಿಟ್ಟಿರುವ ಪ್ರದೇಶದಲ್ಲಿ ಬರುವ ಹಲವು ಜಮೀನುಗಳನ್ನು ರೈತರ ಅನುಮತಿ ಮೇರೆಗೆ ಈ ಬಡಾವಣೆಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ಮಾತ್ರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಅಧಿಸೂಚನೆಹೊರಡಿಸಿರುತ್ತಾರೆ. ನಂತರ ಈ ಜಮೀನುಗಳನ್ನು ಭೂಸ್ವಾಧೀನ ವಿಭಾಗದಿಂದ ಅಭಿಯಂತರ ಶಾಖೆಗೆ ವರ್ಗಾಯಿಸಿದ್ದು, ಬಡಾವಣೆ ನಕ್ಷೆಯನ್ನು ರಚಿಸುವಾಗ ಭೂಸ್ವಾಧೀನ ವಿಭಾಗದಿಂದ ಅಂತಿಮ ಅಧಿಸೂಚನೆಗಿಂತ ಮುಂಚೆ ತಯಾರಾದ ಯೋಜನಾ ನಕ್ಷೆಯನ್ನು ಪರಿಗಣಿಸದೆ ಯಾವ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅದನ್ನು ಮರೆಮಾಚಿ ತಮಗಿಷ್ಟ ಬಂದ ರೀತಿಯಲ್ಲಿ ನಿವೇಶನಗಳನ್ನು ರಚಿಸಿ, ಪ್ರಾಧಿಕಾರಕ್ಕೆ ಹಾಗೂ ಸರ್ಕಾರಕ್ಕೆ ಕೋಟ್ಯಾಂತರ ರೂಗಳನ್ನು ನಷ್ಟ ಮಾಡಿರುತ್ತಾರೆ. ಅದೇ ರೀತಿ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಫೆರಿ ಫೆರಲ್ ರಸ್ತೆಗೂ ಕೆಲವು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಉದ್ದೇಶಿತ ಅಳತೆಯ ರಸ್ತೆಯನ್ನು ಮಾಡದೆ ಚಿಕ್ಕ ರಸ್ತೆ ಮಾಡಿ ರಸ್ತೆಯ ಇಕ್ಕೆಲಗಳಲ್ಲಿ ನಿವೇಶನ ರಚಿಸುತ್ತಿದ್ದು, ಭೂಸ್ವಾಧೀನದಿಂದ ಉಳಿದ ಜಮೀನುಗಳಿಗೆ ರಸ್ತೆ ಸಂಪರ್ಕವಿಲ್ಲದಂತಾಗುತ್ತದೆ. ಆದ್ದರಿಂದ ಬೆಂಗಳೂರು ದಕ್ಷಿಣ ಹಾಗೂ ಉತ್ತರ ತಾಲ್ಲೂಕಿನಲ್ಲಿ ಕೆಂಪೇಗೌಡ ಬಡಾವಣೆ ಹಾಗೂ ಫೆರಿಫೆರಲ್ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅದೇ ಮೂಲ ಉದ್ದೇಶಕ್ಕೆ ಬಳಿಸಿಕೊಳ್ಳಬೇಕು ಹಾಗೂ ಈ ರೀತಿ ಕಾನೂನು ಹಾಗೂ ನಿಯಮ ಉಲ್ಲಂಘನೆ ಮಾಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ.

**ಉತ್ತರ:**

ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಬೆಂಗಳೂರು ದಕ್ಷಿಣ ತಾಲ್ಲೂಕ್, ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಭೀಮನಕುಪ್ಪೆ, ಕೊಮ್ಮಘಟ್ಟ, ಭೀಮನಕುಪ್ಪೆ ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ ಹಾಗೂ ಚೆಲ್ಲಘಟ್ಟ ಹಾಗೂ ಬೆಂಗಳೂರು ಉತ್ತರ ತಾಲ್ಲೂಕ್, ಯಶವಂತಪುರ ಹೋಬಳಿಯ 4 ಗ್ರಾಮಗಳಾದ ಕೊಡಿಗೇಹಳ್ಳಿ, ಶೀಗೆಹಳ್ಳಿ, ಕನ್ನಲ್ಲಿ, ಮಂಗನಹಳ್ಳಿ, **ಒಟ್ಟು 12** ಗ್ರಾಮಗಳಲ್ಲಿ **4043 ಎಕರೆ 27** ಗುಂಟೆ ಜಮೀನಿನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಮಾಡಲು ಸರ್ಕಾರಿ ಆದೇಶದ ಸಂಖ್ಯೆ: **UDD/51/MNX/2010 ದಿನಾಂಕ: 18/02/2010** ರ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಅದರಂತೆ, 39401 ವಿವಿಧ ಅಳತೆಗಳ ನಿವೇಶನಗಳನ್ನು ರಚಿಸಿ ಹಂಚಲು ಯೋಜಿಸಲಾಗಿರುತ್ತದೆ.

ಒಟ್ಟು **39401** ಸಂಖ್ಯೆಯ ನಿವೇಶನಗಳಲ್ಲಿ ಬಡಾವಣೆಯ ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಭೂಪರಿಹಾರವಾಗಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಿ, ಉಳಿಕೆ ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲು ಉದ್ದೇಶಿಸಿ, ಕಾಮಗಾರಿಯನ್ನು **ಮಾರ್ಚ್-2014** ರಲ್ಲಿ ಪ್ರಾರಂಭಿಸಲಾಗಿರುತ್ತದೆ.

ಬಡಾವಣೆಯನ್ನು ನಿರ್ಮಿಸಲು ಪ್ರಾರಂಭದಿಂದ ಪ್ರಸ್ತುತದವರೆಗೆ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಿರುವ ಒಟ್ಟು 2694 ಎಕರೆ 26 ಗುಂಟೆ ಜಮೀನಿನ ಪೈಕಿ **2201 ಎಕರೆ 32 ಗುಂಟೆ** ಜಮೀನುಗಳಲ್ಲಿ ವಿವಿಧ ಅಳತೆಯ ಒಟ್ಟು **26877** ನಿವೇಶನಗಳನ್ನು ರಚಿಸಲಾಗಿದ್ದು, ಇದರಲ್ಲಿ **3559** ಮೂಲೆ ನಿವೇಶನಗಳು ಮತ್ತು **23318** ಮಧ್ಯಂತರ ನಿವೇಶನಗಳಾಗಿರುತ್ತದೆ.

- ಸಾರ್ವಜನಿಕರಿಗೆ ಮೊದಲನೇ ಹಂತದಲ್ಲಿ **5000** ನಿವೇಶನಗಳು ಹಾಗೂ ಎರಡನೇ ಹಂತದಲ್ಲಿ **4971** ನಿವೇಶನಗಳು ವಿವಿಧ ಅಳತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
- ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಮೊದಲನೇ ಹಂತದಲ್ಲಿ **2157** ನಿವೇಶನಗಳು ಹಾಗೂ ಎರಡನೇ ಹಂತದಲ್ಲಿ ಇಲ್ಲಿಯವರೆವಿಗೆ **9256** ನಿವೇಶನಗಳು ವಿವಿಧ ಅಳತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಉಳಿಕೆ ನಿವೇಶನಗಳನ್ನು **ಮುಖ್ಯ ಸಂಪರ್ಕ** ರಸ್ತೆಗೆ ಜಮೀನು ಬಿಟ್ಟುಕೊಟ್ಟಿರುವ ಭೂಮಾಲೀಕರಿಗೆ 50:50 ಅನುಪಾತದಲ್ಲಿ ಹಾಗೂ ಅರ್ಕಾವತಿ ಬಡಾವಣೆ ನಿವೇಶನದಾರರಿಗೆ ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗಿರುತ್ತದೆ.

ಅಂತಿಮ ಅಧಿಸೂಚನೆಯಂತೆ 4043 ಎಕರೆ 27 ಗುಂಟೆಗೆ ನಗರ ಯೋಜನಾ ವಿಭಾಗದಿಂದ ಅನುಮೋದನೆಯಾಗಿರುವ ನಕ್ಷೆಯಂತೆ ಬಡಾವಣೆಯನ್ನು ರಚಿಸಲಾಗುತ್ತಿದೆ.

ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ವರೆಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಖಾಂತರ ಹಾದು ಹೋಗುವ ಮುಖ್ಯ ಸಂಪರ್ಕ ರಸ್ತೆ ನಿರ್ಮಾಣದ ಉದ್ದೇಶಕ್ಕಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ:BDA/Commr/DC(LA)/SLAO/115/2005-06 dated 12/12/2005 & Karnataka Gazette dated 16/11/2006 in Part III at Page 1 to 56 vide Preliminary Notification No.BDA/Comm/DC(LA)SALAO/80/2006-07 dt:15/11/2006 ರಲ್ಲಿ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:UDD/169/MNX/2011, Dt:27/07/2011 ರಲಿ 321 ಎಕರೆ 10 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ, ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯು 100.00 ಮೀ ಅಗಲದ ಮುಖ್ಯ ಸಂಪರ್ಕ ರಸ್ತೆಯಾಗಿದ್ದು, ರಸ್ತೆ ನಿರ್ಮಾಣಕ್ಕಾಗಿ ಇದುವರೆವಿಗೂ 193 ಎಕರೆ 13 ಗುಂಟೆ ಜಮೀನನ್ನು ಇಂಜಿನೀಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಇದರಲ್ಲಿ ಈಗಾಗಲೇ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯನ್ನು (ಪಿ.ಆರ್.ಆರ್-2) ಅನುಮೋದನೆಯಾಗಿರುವ ನಕ್ಷೆಯಂತೆ ನಿರ್ಮಾಣ ಮಾಡಲಾಗುತ್ತಿದ್ದು, ಮುಖ್ಯ ಸಂಪರ್ಕ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಉದ್ದೇಶಿತ 100.00 ಮೀ ಅಗಲದಲ್ಲಿ 06 ಪಥಗಳ 3.00 ಮೀ ಮೀಡಿಯನ್ ಒಳಗೊಂಡ 10.00 ಮೀ ಅಗಲದ 2 ಮುಖ್ಯ ರಸ್ತೆ ಹಾಗೂ ರಸ್ತೆ ಇಕ್ಕೆಲಗಳಲ್ಲಿ ಎರಡು Buolevard ಜಾಗಗಳನ್ನು ಹೊರತುಪಡಿಸಿ 02 ಪಥಗಳ 9.00 ಮೀಟರ್ ಅಗಲಕ್ಕೆ ಎರಡು ಸರ್ವಿಸ್ ರಸ್ತೆಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಪ್ರಾಧಿಕಾರವು ಯಾವ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ.

---

**ನಅಇ 397 ಬೆಂಭೂಸ್ವಾ 2022**

(signature)

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**

41 — 330